ಕರ್ನಾಟಕ ಸರ್ಕಾರ
ಪೊಲೀಸ್ ಇಲಾಖೆ

ಸರ್ಕಾರದ ಆದೇಶದಂತೆ ಸಬ್–ಇನ್ಸ್‌ಪೆಕ್ಟರ್ ವೃಂದದ ಹುದ್ದೆಗಳಿಗೆ ಮೌಖಿಕ ಪರೀಕ್ಷೆಯನ್ನು ನಡೆಸದಿರಲು ನೇಮಕಾತಿ ಕಛೇರಿಯು ಕೈಗೊಂಡ ನಿರ್ಣಯದ ನಡವಳಿ:

ದಿನಾಂಕ:20.11.2019.

ಉಪಸ್ಥಿತರು:

1] ಶ್ರೀ ಟಿ. ಸುನೀಲ್ ಕುಮಾರ್, ಐಪಿಎಸ್, ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ನೇಮಕಾತಿ, ಬೆಂಗಳೂರು.

2] ಶ್ರೀ ಪವಾರ್ ಪ್ರವೀಣ್ ಮಧುಕರ್, ಐಪಿಎಸ್, ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ನೇಮಕಾತಿ (ಪ್ರಭಾರ), ಬೆಂಗಳೂರು.

2019–20ನೇ ಸಾಲಿಗೆ ಸರ್ಕಾರವು ಅನುಮತಿ ನೀಡಿರುವ ಸಬ್–ಇನ್ಸ್‌ಪೆಕ್ಟರ್ ವೃಂದದ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮಕೈಗೊಳ್ಳಲಾಗಿದ್ದು, ಅದರಂತೆ ಪೊಲೀಸ್ ಸಬ್–ಇನ್ಸ್‌ಪೆಕ್ಟರ್ (ಸಿವಿಲ್) (ಪುರುಷ & ಮಹಿಳೆ) ಹಾಗೂ ಸೇವಾನಿರತರನ್ನೊಳಗೊಂಡಂತೆ–200 ಮತ್ತು ಸಶಸ್ತ್ರ ಮೀಸಲು ಪೊಲೀಸ್ ಸಬ್–ಇನ್ಸ್‌ಪೆಕ್ಟರ್ (ಸಿಎಆರ್/ಡಿಎಆರ್) (ಪುರುಷ)–40 ಹಾಗೂ ವಿಶೇಷ ಮೀಸಲು ಸಬ್–ಇನ್ಸ್‌ಪೆಕ್ಟರ್ (ಕೆಎಸ್ಆರ್‌ಪಿ) (ಪುರುಷ)–40 ಹುದ್ದೆಗಳಿಗೆ ನೇಮಕಾತಿ ಅಧಿಸೂಚನೆಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 18.07.2019 ಮತ್ತು 29.08.2019 ರಂದು ಪ್ರಕಟಿಸಲಾಗಿರುತ್ತದೆ. ಸದರಿ ಅಧಿಸೂಚನೆಗಳಲ್ಲಿ ಸಬ್–ಇನ್ಸ್‌ಪೆಕ್ಟರ್ ಹುದ್ದೆಗಳನ್ನು "ಕರ್ನಾಟಕ ರಾಜ್ಯ ಪೊಲೀಸ್ ಲಿಪಿಕ ನೌಕರರ ಸೇವೆಗಳು ಸೇರಿದಂತೆ (ನೇಮಕಾತಿ) (ತಿದ್ದುಪಡಿ) (ನಿಯಮಗಳು) 2009 ಮತ್ತು ಕರ್ನಾಟಕ ನಾಗರಿಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಾವಳಿ 1977 ಹಾಗೂ ತಿಳಿಯಪಡಿಸಿದ ನಿಯಮಗಳಿಗೆ ಕಾಲಕಾಲಕ್ಕೆ ಆಗುವ ತಿದ್ದುಪಡಿಗಳ ಅನುಸಾರ ಕೈಗೊಳ್ಳಲಾಗುತ್ತಿದೆ ಎಂದು ನಮೂದಿಸಿದ್ದು, ಅದರಂತೆ ಸಬ್–ಇನ್ಸ್‌ಪೆಕ್ಟರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿರುವ ಅರ್ಹ ಅಭ್ಯರ್ಥಿಗಳಿಗೆ ಮೆರಿಟ್ ಅನುಸಾರ ಹಾಗೂ ಹುದ್ದೆಗಳ ಮೀಸಲಾತಿಗನುಗುಣವಾಗಿ 1:2 ಅನುಪಾತದಲ್ಲಿ ಅರ್ಹ ಅಭ್ಯರ್ಥಿಗಳನ್ನು ಮೌಖಿಕ ಪರೀಕ್ಷೆಗೆ ಆಹ್ವಾನಿಸಿ 10 ಅಂಕಗಳ ಮೌಖಿಕ ಪರೀಕ್ಷೆಯನ್ನು ನಡೆಸಲಾಗುವುದೆಂದು ತಿಳಿಸಲಾಗಿರುತ್ತದೆ.

ಆದರೆ, ಸರ್ಕಾರವು ಅಧಿಸೂಚನೆ ಸಂಖ್ಯೆ:ಡಿಪಿಎಆರ್ 191 ಎಸ್ಆರ್ಆರ್ 2015, ದಿನಾಂಕ: 01.07.2019 ರಲ್ಲಿ ಕರ್ನಾಟಕ ನಾಗರಿಕ ಸೇವೆಗಳು (ಸಾಮಾನ್ಯ ನೇಮಕಾತಿ) (ತಿದ್ದುಪಡಿ) ನಿಯಮಗಳು 2019ನ್ನು ಪ್ರಕಟಿಸಿದ್ದು, ಸದರಿ ನಿಯಮಗಳಲ್ಲಿ ಈ ಕೆಳಕಂಡಂತೆ ಷರತ್ತು ವಿಧಿಸಲಾಗಿರುತ್ತದೆ.

"(4) Notwithstanding anything contained in these rules or in any other rules of recruitment in respect of any service or post made or deemed to have been made under the Karnataka State Civil Services Act, 1978 (Karnataka Act 14 of 1990), there shall be no Viva Voce or Personality Test or Interview in respect of direct recruitment to any of the Group-C posts in the State Civil Services."

.2..

downloaded from: www.kpscvaani.com

ಸಬ್–ಇನ್ಸ್‌ಪೆಕ್ಟರ್ ವೃಂದದ ಹುದ್ದೆಗಳು 'ಸಿ' ಗ್ರೂಪ್ ಹುದ್ದೆಗಳಾಗಿರುವುದರಿಂದ ಸದರಿ ಹುದ್ದೆಗಳಿಗೆ ಮೌಖಿಕ ಪರೀಕ್ಷೆಯನ್ನು ನಡೆಸುವ ಕುರಿತು ಸರ್ಕಾರವನ್ನು ಸ್ಪಷ್ಟೀಕರಣ ಕೋರಲಾಗಿದ್ದು, ಸರ್ಕಾರವು ಪತ್ರ ಸಂಖ್ಯೆ:ಹೆಚ್‌ಡಿ 82 ಪಿಪಿಎ 2019–ಪಿಎಸ್‌–ಬಿ, ದಿನಾಂಕ: 11.11.2019 ರಲ್ಲಿ ಈ ಕೆಳಕಂಡಂತೆ ಸ್ಪಷ್ಟೀಕರಣ ನೀಡಿರುತ್ತದೆ.

ಸರ್ಕಾರದ ತಿದ್ದುಪಡಿ ನಿಯಮಗಳು ದಿನಾಂಕ: 01.07.2019 ರಂದು ರಾಜ್ಯ ವಿಶೇಷ ಪತ್ರದಲ್ಲಿ ಪ್ರಕಟವಾಗಿರುವುದರಿಂದ, ಸದರಿ ನಿಯಮಗಳು ಅದೇ ದಿನದಿಂದಲೇ ಜಾರಿಗೆ ಬಂದಿದೆ ಎಂದು ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ 191 ಎಸ್‌ಆರ್‌ಆರ್ 2015, ದಿನಾಂಕ: 01.07.2019 ರಲ್ಲಿ ಪ್ರಕಟಿಸಲಾದ ತಿದ್ದುಪಡಿಗಳು ಭವಿಷ್ಯವರ್ತಿಯಾಗಿ ಅನ್ವಯವಾಗುತ್ತದೆಯೇ ಹೊರತು ಪೂರ್ವಾನ್ವಯವಾಗಿ ಅನ್ವಯವಾಗುವುದಿಲ್ಲ. ಸದರಿ ಅಂಶದೊಂದಿಗೆ ಪೊಲೀಸ್ ಇಲಾಖೆಯ ಸಬ್–ಇನ್ಸ್‌ಪೆಕ್ಟರ್ ವೃಂದದ ವಿವಿಧ ಹುದ್ದೆಗಳ ನೇಮಕಾತಿಯನ್ನು ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಿರುತ್ತದೆ.

ಸರ್ಕಾರದ ನಿರ್ದೇಶನದಂತೆ ನೇಮಕಾತಿ ಘಟಕದಿಂದ ಕೆಳಕಂಡಂತೆ ನಿರ್ಣಯಿಸಲಾಗಿರುತ್ತದೆ.

ಆದೇಶ ಸಂಖ್ಯೆ:08/ನೇಮಕಾತಿ–2/2019–20, ದಿನಾಂಕ:20.11.2019

ಸರ್ಕಾರವು 'ಸಿ' ಗ್ರೂಪ್ ಹುದ್ದೆಗಳಿಗೆ ಮೌಖಿಕ ಪರೀಕ್ಷೆಯನ್ನು ನಡೆಸಬಾರದೆಂಬ ತಿದ್ದುಪಡಿ ನಿಯಮಗಳು ದಿನಾಂಕ: 01.07.2019 ರಿಂದ ಭವಿಷ್ಯವರ್ತಿಯಾಗಿ ಅನ್ವಯವಾಗುವುದಾಗಿ ನಿರ್ದೇಶಿಸಿರುವುದರಿಂದ, ನೇಮಕಾತಿ ಕಛೇರಿಯಿಂದ ಪ್ರಕಟಿಸಲಾಗಿರುವ **ಪೊಲೀಸ್ ಸಬ್–ಇನ್ಸ್‌ಪೆಕ್ಟರ್ (ಸಿವಿಲ್) (ಪುರುಷ & ಮಹಿಳೆ) ಹಾಗೂ ಸೇವಾನಿರತರನ್ನೊಳಗೊಂಡಂತೆ–200 ಮತ್ತು ಸಶಸ್ತ್ರ ಮೀಸಲು ಪೊಲೀಸ್ ಸಬ್–ಇನ್ಸ್‌ಪೆಕ್ಟರ್ (ಸಿಎಆರ್/ಡಿಎಆರ್) (ಪುರುಷ)–40 ಹಾಗೂ ವಿಶೇಷ ಮೀಸಲು ಸಬ್–ಇನ್ಸ್‌ಪೆಕ್ಟರ್ (ಕೆಎಸ್‌ಆರ್‌ಪಿ) (ಪುರುಷ)–40** ಹುದ್ದೆಗಳಿಗೆ ಸರ್ಕಾರದ ನಿರ್ದೇಶನದಂತೆ ಮೌಖಿಕ ಪರೀಕ್ಷೆಯನ್ನು ನಡೆಸದಿರಲು ನಿರ್ಣಯ ಕೈಗೊಳ್ಳಲಾಗಿರುತ್ತದೆ.

20/11

ಶ್ರೀ ಟಿ. ಸುನೀಲ್ ಕುಮಾರ್, ಐಪಿಎಸ್,
ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್,
ನೇಮಕಾತಿ ಹಾಗೂ ಅಧ್ಯಕ್ಷರು,
ಸಬ್–ಇನ್ಸ್‌ಪೆಕ್ಟರ್ ಹುದ್ದೆಗಳ ನೇಮಕಾತಿ ಸಮಿತಿ.
ಕಾರ್ಲಟನ್ ಭವನ, ಅರಮನೆ ರಸ್ತೆ,
ಬೆಂಗಳೂರು.

20/11/19

ಶ್ರೀ ಪವಾರ್ ಪ್ರವೀಣ್ ಮಧುಕರ್,
ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್,
ನೇಮಕಾತಿ(ಪ್ರಭಾರ) ಹಾಗೂ ಸದಸ್ಯ ಕಾರ್ಯದರ್ಶಿ,
ಸಬ್–ಇನ್ಸ್‌ಪೆಕ್ಟರ್ ಹುದ್ದೆಗಳ ನೇಮಕಾತಿ ಸಮಿತಿ.
ಕಾರ್ಲಟನ್ ಭವನ, ಅರಮನೆ ರಸ್ತೆ,
ಬೆಂಗಳೂರು.

downloaded from: www.kpscvaani.com